ಅಸಲು ದಾವೆ ಸಂಖ್ಯೆ - 168/2015
ಡಿ.ಡಬ್ಲ್ಯೂ - 03
ದಿನಾಂಕಃ 20-06-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಎನ್ ಎನ್ ಪಿ ವಕೀಲರಿಂದ**

ಸಾಕ್ಷಿ ಹೇಳಲು ನಿಮ್ಮನ್ನು ಮತ್ತು ಭೀಮಪ್ಪ (ಡಿ ಡಬ್ಲೂ- 4) ರವರನ್ನು ಯಾರು ಕರೆದುಕೊಂಡು ಬಂದರು ಎಂದರೆ 2 ನೇ ಪ್ರತಿವಾದಿಯು ಕರೆದುಕೊಂಡು ಬಂದಿರುತ್ತಾರೆ. ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಹೀಗೆ ಹೇಳಬೇಕು ಎಂದು 2 ನೇ ಪ್ರತಿವಾದಿಯು ನಿಮಗೆ ಹೇಳಿದ್ದಾರಾ ಎಂದರೆ ಹೇಳಿದ್ದಾರೆ ಎಂದು ನುಡಿಯುತ್ತಾರೆ. ನಿಡಿ- 18 ಮತ್ತು 19 ರಲ್ಲಿ ನಿಮ್ಮ ಸಹಿಗಳನ್ನು ಗುರುತಿಸಬೇಕೆಂದು 2 ನೇ ಪ್ರತಿವಾದಿಯು ಹೇಳಿ ಕೊಟ್ಟಿದ್ದಾನೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನಿಮ್ಮ ಮತ್ತು ಭಿಮಪ್ಪ ರವರ ಸಹಿಗಳನ್ನು ಬಿಟ್ಟು ಉಳಿದವರ ಸಹಿಯನ್ನು ಗುರುತಿಸಬೇಕೆಂದು 2 ನೇ ಪ್ರತಿವಾದಿಯು ಹೇಳಿ ಕೊಟ್ಟಿದ್ದಾರೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ನಿಮಗೆ ಮತ್ತು ಭೀಮಪ್ಪ (ಡಿ ಡಬ್ಲೂ- 4) ರವರಿಗೆ ಒಳ್ಳೆಯ ಗೆಳತನ ಇದೆ ಎಂದರೆ ಸರಿ. ಒಬ್ಬರಿಗೊಬ್ಬರು ಮಾತನಾಡಿಕೊಂಡು ಇಬ್ಬರಿಗೂ ಅನುಕೂಲ ವಾಗುವಂತೆ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿದ್ದೀರಿ ಎಂದರೆ ಸರಿ. ಅದೇ ರೀತಿ ಈ ದಾವೆಯಲ್ಲಿಯೂ ಸಾಕ್ಷಿ ಹೇಳಲು ಇಬ್ಬರು ಮಾತನಾಡಿಕೊಂಡು ಬಂದಿದ್ದೀರಿ ಎಂದರೆ ಸರಿ. ಪ್ರತಿವಾದಿಯರು ನಿಮಗೆ ಏನಾಗಬೇಕು ಎಂದರೆ ಚಿಕ್ಕಪ್ಪನ ಮಕ್ಕಳು ಎಂದು ನುಡಿಯುತ್ತಾರೆ. ನಾನು ಸಣ್ಣ ಲಾಡಸಾಬ ರವರ ಮಗನಾದ ಚಮನಸಾಬ ರವರ ಮಗ ಇರುತ್ತೇನೆ. ಈ ದಾವೆಯಲ್ಲಿ ಇರುವ ಅಸ್ತಿಗಳನ್ನು ದೊಡ್ಡ ಲಾಡಸಾಬನ ಮಗನಾದ ಪೀರಸಾಬ ರವರ ಮಗನಾದ ಚುಮನಸಾಬ ರವರ ಹೆಸರಿನಲ್ಲಿ 1984 ರಲ್ಲಿ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ.

ಈ ದಾವೆಯನ್ನು ಯಾರು, ಯಾವ ಕಾರಣಕ್ಕಾಗಿ ಹೂಡಿದ್ದಾರೆ ಎಂದು ನಿಮಗೆ ಸ್ವಂತಕ್ಕೆ ಮಾಹಿತಿ ಇದೆಯಾ ಎಂದರೆ ಪ್ಲಾಟ ನಂ. 210 ಕ್ಕೆ ಸಂಬಂಧಪಟ್ಟಂತೆ ದೊಡ್ಡ ಲಾಡಸಾಬನ ಮೊಮ್ಮಗನಾದ ಚಮನಸಾಬ ರವರು ಈ ದಾವೆಯನ್ನು ಜಹಾಂಗೀರ ಮತ್ತು ಕಬೀರಸಾಬನ ಮೇಲೆ ಹೂಡಿರುತ್ತಾರೆ. ದಾವೆಯ ಬಗ್ಗೆ ಉಳಿದ ಮಾಹಿತಿಗಳು ನನಗೆ ಗೊತ್ತೀರುವುದಿಲ್ಲ. ದಾವಾ ಆಸ್ತಿಯನ್ನು ನೋಡಿದ್ದೇನೆ. ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು

ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯು ಬಯಲು ಜಾಗ ಇದೆ ಅಂತಾ ಹೇಳಿ ಬರೆಸಿದ್ದೀರಿ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮೊದಲಿಗೆ ದೊಡ್ಡ ಲಾಡಸಾಬನ ಮೊಮ್ಮಗನಾದ ಚಮನಸಾಬ ರವರ ಹೆಸರಿಗೆ ಆಸ್ತಿ ಇತ್ತು ಅಂತಾ ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ದೊಡ್ಡ ಲಾಡಸಾಬನ ಮನೆತನ ಮತ್ತು ಸಣ್ಣ ಲಾಡಸಾಬನ ಮನೆತನ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ದೊಡ್ಡ ಲಾಡಸಾಬನ ಮನೆತನ ಮತ್ತು ಸಣ್ಣ ಲಾಡಸಾಬನ ರವರ ಮನೆತನಕ್ಕೆ ದಾವಾ ಆಸ್ತಿ ಬಿಟ್ಟು ಬೇರೆ ಆಸ್ತಿಗಳು ಇರುತ್ತದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. ಸಣ್ಣ ಲಾಡಸಾಬನ ಮನೆತನದವರಾದ ಚಮನಸಾಬ, ಹಜರೇಸಾಬ, ಹುಸೇನಸಾಬ ಮತ್ತು ಪೀರಸಾಬ ರವರು, ವಾರಸಾ ನಾತೆಯಿಂದ ಸಣ್ಣ ಲಾಡಸಾಬನ ಮನೆತನದ ಆಸ್ನಿಗಳನ್ನು ಅನುಭವಿಸಿಕೊಂಡು ಬರುತ್ತೀದ್ದಿರಿ ಎಂದರೆ ಸರಿ. ಆ ಪ್ರಕಾರ ಉತಾರಗಳಲ್ಲಿ ಖಾತಾ ಬದಲಾವಣೆಗಳು ಆಗಿವೆ ಎಂದರೆ ಸರಿ.

ದೊಡ್ಡ ಲಾಡಸಾಬನ ಮನೆತನದವರಾದ ಪೀರಸಾಬ ನ ಮಕ್ಕಳಾದ ಚಮನಸಾಬ, ಹಜರೇಸಾಬ, ಖಾದರಸಾಬ ರವರು, ವಾರಸಾ ನಾತೆಯಿಂದ ದೊಡ್ಡ ಲಾಡಸಾಬನ ಮನೆತನದ ಆಸ್ನಿಗಳನ್ನು ಅನುಭವಿಸಿಕೊಂಡು ಬರುತ್ತೀದ್ದಾರೆ ಎಂದರೆ ಸರಿ. ಆ ಪ್ರಕಾರ ಉತಾರಗಳಲ್ಲಿ ಖಾತಾ ಬದಲಾವಣೆಗಳು ಆಗಿವೆ ಎಂದರೆ ಅವರ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆಯನ್ನು ಹೂಡಿದ ನಂತರ ಮತ್ತು ನೋಟಿಸ ಬಂದ ನಂತರ ದೊಡ್ಡ ಲಾಡಸಾಬನ ಹೆಸರಿನಲ್ಲಿರುವ ದಾಖಲೆಗಳನ್ನು ಏನಾದರೂ ಪರಿಶೀಲಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದೊಡ್ಡ ಲಾಡಸಾಬನ ಮೊಮ್ಮಗನಾದ ಚಮನಸಾಬ ರವರು ತನ್ನ ಒಟ್ಟು ಕುಟುಂಬದ ಪರವಾಗಿ ದಾವಾ ಆಸ್ತಿಯಾದ ಆಸ್ತಿಯ ಮೂಲ ಸಂಖ್ಯೆಃ 210 ನ್ನು 1984 ರಲ್ಲಿ ಫಕ್ಕೀರಯ್ಯ ಕಲ್ಮಠ ರವರಿಂದ ಖರೀದಿ ಹಿಡಿದಿದ್ದಾರೆ ಎಂದರೆ ಸರಿ. ಸದರಿ ಖರೀದಿ ಪತ್ರವು ಉಪ ನೋದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿಯಾಗಿದೆ ಎಂದರೆ ಸರಿ. ಖರೀದಿ ಪತ್ರ ಪ್ರಕಾರ ಚಮನಸಾಬ ರವರ ಹೆಸರು ದಾವಾ ಆಸ್ತಿಯ ಉತಾರಗಳಲ್ಲಿ ದಾಖಲು ಆಗಿದೆ ಎಂದರೆ ಆಗಿರಬಹುದು ಅದರೆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಖರೀದಿ ಹಿಡಿದಾಗಿನಿಂದ ಮಾಲ್ಕಿ ನಾತೆಯಿಂದ ಕಬ್ಜಾ ವಹಿವಾಟಿನಲ್ಲಿ ಇದ್ದರು ಎಂದರೆ ಸರಿಯಲ್ಲ. ಸಣ್ಣ ಲಾಡಸಾಬರವರ

ವಂಶಸ್ಥರಾದ ಹಜರೇಸಾಬರವರು ಕಬ್ಜೆಯಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಹಜರೇಸಾಬರ ರವರು ಯಾವ ಇಸವಿಯಿಂದ ಕಬ್ಜೆಯಲ್ಲಿ ಇದ್ದಾರೆ ಎಂದರೆ ಪೀರಸಾಬ ತಂದೆ ದೊಡ್ಡ ಲಾಡಸಾಬ ರವರು ಖರೀದಿ ಹಿಡಿದಾಗಿನಿಂದಲೂ ಸಹ ಹಜರೇಸಾಬ ರವರೇ ಕಬ್ಜೆಯಲ್ಲಿ ಇದ್ದಾರೆ.

ಪೀರಸಾಬ ತಂದೆ ದೊಡ್ಡ ಲಾಡಸಾಬ ರವರು ಖರೀದಿ ಹಿಡಿದಿದ್ದಾರೆ ಎಂದು ಹೇಳಲಾದ ಆಸ್ತಿಯ ದಾಖಲೆಯನ್ನು ನೀವು ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾವು ಮತ್ತು ಪ್ರತಿವಾದಿಯರು ನಮ್ಮ ಮನೆತನದ ಎಲ್ಲಾ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡು 40 ವರ್ಷದಿಂದ ಬೇರೆ ಬೇರೆ ವಾಸವಾಗಿದ್ದೇವೆ. ಆ ಪ್ರಕಾರ ವರದಿ ನೀಡಿ ದಾಖಲಾತಿಗಳನ್ನು ಖಾತೆ ಮಾಡಿಕೊಂಡಿದ್ದೀರಿ ಎಂದರೆ ಸರಿ. ಈ ಪ್ರಕರಣದಲ್ಲಿರುವ ದಾವಾ ಆಸ್ತಿಯನ್ನು ನೀವು ಮಾಡಿಕೊಂಡ ಪಾಲು ವಿಭಾಗದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ದೊಡ್ಡ ಲಾಡಸಾಬನ ಮೊಮ್ಮಗನಾದ ಚಮನಸಾಬ ರವರು ದಾವಾ ಆಸ್ತಿಯನ್ನು ಖರೀದಿ ಹಿಡಿದು 2013 ರಲ್ಲಿ ಪಂಚಾಯತಿಯಿಂದ ಠರಾವು ಹೊರಡಿಸಿ ವಾದಿಯರಿಗೆ ಬಿಟ್ಟು ಕೊಟ್ಟಿರುತ್ತಾನೆ ಎಂದರೆ ಠರಾವು ಆಗಿರುವುದು ಸರಿ. ಆದರೆ ಆಗ ಗ್ರಾಮ ಪಂಚಾಯತಿಯ ಸದಸ್ಯರು ಚಮನಸಾಬರವರೇ ಅಗಿದ್ದರಿಂದ ಅವರಿಗೆ ಹೇಗೆ ಬೇಕು ಹಾಗೆ ಠರಾವನ್ನು ಹೊರಡಿಸಿ ಹೆಸರನ್ನು ದಾಖಲು ಮಾಡಿದ್ದಾರೆ ಎಂದು ನುಡಿಯುತ್ತಾರೆ.

ನಿಮ್ಮ ಊರು ಯಾವ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಬರುತ್ತದೆ ಎಂದರೆ, ಚಿಲ್ಲೂರ ಗ್ರಾಮ ಪಂಚಾಯತಿಗೆ ಬರುತ್ತದೆ. ಪಂಚಾಯತಿಯಲ್ಲಿ ಬೇರೆ ಸದಸ್ಯರ ಅಭಿಪ್ರಾಯವನ್ನು ಪಡೆದು ಠರಾವು ಹೊರಡಿಸಿರುತ್ತಾರೆ ಎಂದರೆ ಆಗ ಚಮನಸಾಬ ರವರು ಅಧಿಕಾರದಲ್ಲಿ ಇದ್ದರು ಎಂದು ನುಡಿಯುತ್ತಾರೆ. ದಾಖಲಾತಿಗಳ ಆಧಾರದ ಮೇಲೆ ವಾದಿಯರ ಹೆಸರು ದಾವಾ ಆಸ್ತಿಯಲ್ಲಿ ನಮೂದು ಅಗಿರುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತವಾಗಿ ದಾವಾ ಆಸ್ತಿಗೆ ವಾದಿಯರ ಹೆಸರು ನಮೂದಾಗಿದೆ ಎಂದರೆ ನಾನು ದಾಖಲೆಗಳನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಶಹಜಾನ ನದಾಫ ರವರಿಗೆ ಯಾರು ಯಾವಾಗ ದಾವಾ ಆಸ್ತಿಯನ್ನು ಬರೆದುಕೊಟ್ಟರು ಎಂದರೆ, ದೊಡ್ಡ ಲಾಡಸಾಬನ ಮೊಮ್ಮಗನಾದ ಚಮನಸಾಬ ರವರು ಬರೆದು ಕೊಟ್ಟಿರುತ್ತಾರೆ. ಶಹಜಾನ ರವರಿಗೆ ಯಾವ ದಾಖಲೆ ಮುಖಾಂತರ ಬರೆದುಕೊಟ್ಟರು ಎಂದರೆ ಮೊದಲು ದೊಡ್ಡ ಲಾಡಸಾಬನ ಮೊಮ್ಮಗನಾದ ಚಮನಸಾಬ ರವರು ಶಹಜಾನ ರವರಿಗೆ ಆಸ್ತಿಯನ್ನು ಬರೆದು ಕೊಟ್ಟಿದ್ದರು

ನಂತರ ಶಹಜಾನ ರವರು ತೀರಿಕೊಂಡ ನಂತರ ಸದರಿ ಚಮನಸಾಬ ರವರೇ ಪ್ರತಿವಾದಿಯರಿಂದ ಹಣ ಪಡೆದು ಅವರಿಗೆ ಪುನಃ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಷಯ ಒಟ್ಟು ಎಷ್ಟು ದಾಖಲೆಗಳು ಆಗಿವೆ ಎಂದರೆ 3 ದಾಖಲೆಗಳು ಆಗಿವೆ. ಸದರಿ ದಾಖಲೆಗಳು ಏನಾದರೂ ನೊಂದಣಿ ಆಗಿದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳು ಯಾವ ಇಸವಿಯಂದು ಆಗಿರುತ್ತವೆ ಎಂದರೆ ನೆನೆಪಿಲ್ಲ.

ದಾವಾ ಆಸ್ತಿಯ ಸಂಖ್ಯೆಃ 210 ನ್ನು ಅಳತೆ ಮಾಡಿದ್ದೀರಾ ಎಂದರೆ ದಾವಾ ಆಸ್ತಿ 2 ನ್ನು ಕೂಡಿಸಿದರೆ ಒಟ್ಟು ಅಗಲ 35 ಅಡಿ, ಉದ್ದ 99 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ಯಾವಾಗ ಅಳತೆ ಮಾಡಿದ್ದೀರಿ ಎಂದರೆ ನಾನ್ನು ನನ್ನ ಜಾಗದಲ್ಲಿ ಮನೆಯನ್ನು ಕಟ್ಟುವ ವೇಳೆ ನಾನೇ ಅಳತೆ ಮಾಡಿರುತ್ತೇನೆ. ನಿಮ್ಮ ಮನೆಯ ನಂಬರ ಎಷ್ಟು ಎಂದರೆ 209 ಇರುತ್ತದೆ. ನೀವೆನಾದರೂ ಮನೆಯಲ್ಲಿ ಕಟ್ಟಲು ಗ್ರಾಮ ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದುಕೊಂಡು ಕಟ್ಟಿದ್ದೀರಾ ಎಂದರೆ ಪರವಾನಿಗೆಯನ್ನು ಪಡೆದುಕೊಂಡು ಕಟ್ಟಿರುತ್ತೇನೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ದಾವಾ ಆಸ್ತಿಯಲ್ಲಿ ಪಶ್ಚಿಮ ಭಾಗದಲ್ಲಿ ಒಂದು ಶೆಡ್ ವ ಮನೆಯನ್ನು ಹಾಕಿಕೊಂಡು 1 ನೇ ಪ್ರತಿವಾದಿಯು ಇದ್ದಾರೆ ಎಂದು ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಕೃಷಿ ಸಲಕರಣೆಗಳನ್ನು ಇಟ್ಟು ಕೊಂಡು ತಿಪ್ಪೆ ವ ಬಣವೆ ಹಾಕಿಕೊಂಡು ಇದ್ದಾರೆ ಎಂದು ಬರೆಸಿದ್ದೀರಿ ಎಂದರೆ ಅವರುಹಾಕಿಕೊಂಡಿರಬಹುದು ಆದರೆ ಏನು ಬರೆಸಿದ್ದೇನೆ ಎಂದು ನೆನೆಪಿಲ್ಲ ಎಂದು ನುಡಿಯುತ್ತಾರೆ.

2013 ರ ವರೆಗೆ ದಾವಾ ಆಸ್ತಿಯಲ್ಲಿ ದೊಡ್ಡ ಲಾಡಸಾಬನ ಮೊಮ್ಮಗನಾದ ಚಮನಸಾಬ ರವರೇ ಕಬ್ಜಾದಲ್ಲಿ ಇದ್ದಾರೆ ಎಂದರೆ ಅವರು ಎಂದಿಗೂ ಸಹ ಕಬ್ಜಾದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. 2013 ರ ನಂತರ ದಾವಾ ಆಸ್ತಿಯು 2 ಉತಾರಗಳು ಆಗಿದ್ದು ಅಂದಿನಿಂದ ವಾದಿಯರ ಕಬ್ಜಾದಲ್ಲಿ ಇದೆ ಎಂದರೆ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ದಾವಾ ಆಸ್ತಿಯಲಿ ತಿಪ್ಪೆ ಬಣವೆ ಹಾಕಿ ಕಬ್ಜಾದಲ್ಲಿ ಇದ್ದಾರೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯರು ಕಬ್ಜಾದಲ್ಲಿ ಇದ್ದರೂ ಸಹ ಪ್ರತಿವಾದಿಯರ ಮಾತನ್ನು ಕೇಳಿಕೊಂಡು ಅವರು ಕಬ್ಜಾದಲ್ಲಿ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಡಿ-18 ಮತ್ತು 19 ರಲ್ಲಿ ನಿಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಯಾರು ಎಷ್ಟು ಮೊತ್ತದ ಬಾಂಡ ಪೇಪರನ್ನು ತಂದು ಬರೆಸಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವ ತಾರೀಖಿನಂದು ಸದರಿ ಕಾಗದಗಳು ಆಗಿರುತ್ತವೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕಾಗದಗಳಿಗೆ ನಿಮ್ಮನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ನೀವು ಸಹಿ ಮಾಡುವ ವೇಳೆಯಲ್ಲಿ ಸದರಿ ಕಾಗದಗಳು ಖಾಲಿ ಇತ್ತು ಎಂದರೆ ಬರೆದ ಮೇಲೆ ಸಹಿ ಮಾಡಿರುತ್ತೇನೆ. ಸದರಿ ಕಾಗದಗಳನ್ನು ಯಾರು ಬರೆದರು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕಾಗದ ತಯಾರಾಗುವ ವೇಳೆಯಲ್ಲಿ ನಿಮ್ಮ ಸಮಕ್ಷಮದಲ್ಲಿ ಹಣದ ವ್ಯವಹಾರ ಏನಾದರೂ ನಡೆದಿದೆಯಾ ಎಂದರೆ ನಡೆದಿರುತ್ತದೆ. ಯಾರು ಯಾರಿಗೆ ಎಷ್ಟು ಹಣವನ್ನು ನೀಡಿದರು ಎಂದರೆ 1984 ರಲ್ಲಿ 19,000/- 4-5 ವರ್ಷದ ಬಳಿಕ 10,000/- ವನ್ನು ಜಹಾಂಗೀರಸಾಬ ರವರು ಚಮನಸಾಬರವರಿಗೆ ನೀಡಿರುತ್ತಾರೆ. ಮೇಲೆ ಹೇಳಿರುವ ಹಣದ ಪತ್ರಗಳಿಗೆ ನೀವು ಸಹಿ ಮಾಡಿರುತ್ತೀರಿ ಎಂದರೆ ಸರಿ. ಸದರಿ ಕಾಗದಗಳಿಗೆ ಬಿಮಪ್ಪರವರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ.

ಯಾವುದೇ ವ್ಯವಹಾರ ಆಗದೇ ಇದ್ದರು ಸಹ ವ್ಯವಹಾರ ಆಗಿದೇ ಎಂದು ಸುಳ್ಳು ನುಡಿಯತ್ತಿದ್ದೀರಿ ಎಂದರೆ ಸರಿಯಲ್ಲ. ನಿಡಿ- 18 ಮತ್ತು 19 ಆಗುವ ವೇಳೆಯಲ್ಲಿ ದಾಖಲೆಗಳಲ್ಲಿ ಕಾಣಿಸಿರುವ ಆಸ್ತಿಗಳ ಅಳತೆಯನ್ನು ಎನಾದರೂ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ- 18 ಮತ್ತು 19 ರಲ್ಲಿ ಕಬ್ಜಾವನ್ನು ಇಂದೇ ಬಿಟ್ಟು ಕೊಡುತ್ತಿದ್ದೇವೆ ಬರೆದಿದ್ದಾರೇಯೇ ಎಂದರೆ ನನಗೆ ಓದಲು ಬರುವುದಿಲ್ಲ ಸಹಿಯನ್ನು ಮಾತ್ರ ಮಾಡುತ್ತೇನೆ. ನಿಮ್ಮ ಮತ್ತು ಬೀಮಪ್ಪ ರವರ ಸಮಕ್ಷಮ ನಿಡಿ- 18 ಮತ್ತು 19 ರಲ್ಲಿ ಕಾಣಿಸಿರುವ ಆಸ್ತಿಗಳ ಕಬ್ಜಾವನ್ನು ಏನಾದರೂ ಹಸ್ತಾಂತರಿಸಲಾಗಿದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಹೇಳಿರುವ ದಾಖಲಾತಿಗಳು ಖೊಟ್ಟಿ ದಾಖಲಾತಿಗಳು ಎಂದರೆ ಸರಿಯಲ್ಲ. ಈವತ್ತಿನವರೆಗೂ ಕೂಡಾ ಲಾಡಸಾಬನ ಮೊಮ್ಮಗನಾದ ಚಮನಸಾಬ ನಂತರ ವಾದಿಯರ ಹೆಸರಿನಲ್ಲಿ ಮಾಲ್ಕಿ ನಾತೆಯಿಂದ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದೊಡ್ಡ ಲಾಡಸಾಬ ಮತ್ತು ಸಣ್ಣ ಲಾಡಸಾಬ ರವರ ತಂದೆಯ ಹೆಸರು ಏನು ಎಂದರೆ ಅಲಿಸಾಬ. ಈ ಕುರಿತು ಯಾವುದಾದರೂ ನೀವು ದಾಖಲೆಯನ್ನು ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದೊಡ್ಡ ಲಾಡಸಾಬ ಮತ್ತು ಸಣ್ಣ ಲಾಡಸಾಬ ರವರು ಅಣ್ಣ ತಮ್ಮಂದಿರು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಪ್ರತಿವಾದಿ ಪರ ಶ್ರೀ ಎನ್ ಎಸ್ ಪಿ ವಕೀಲರಿಂದ.**

ಮೊದಲು ದೊಡ್ಡ ಲಾಡಸಾಬ ಮತ್ತು ಸಣ್ಣ ಲಾಡಸಾಬ ರವರು ಒಂದೇ ಮನೆತನದವರು ಎಂದರೆ ಅವರು ಅಣ್ಣತಮ್ಮಂದಿರು ಎಂದು ನುಡಿಯುತ್ತಾರೆ. ಪೀರಸಾಬ ರವರ ಮಗನಾದ ಚಮನಸಾಬ ರವರು ನಿಮಗೆ ಏನಾಗಬೇಕು ಎಂದರೆ ಅಣ್ಣ ನಾಗಬೇಕು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.